ಬರಬಾರದು, ಅಷ್ಟೇ ಶಿಸ್ತಿನಿಂದ ನಡೆದುಕೊಳ್ಳಬೇಕು ಎಂದವನ ಅಪೇಕ್ಷೆ. ಗಿರಾಕಿಗಳ ಜೊತೆ ಎಷ್ಟು ಬೇಕೋ ಅಷ್ಟೇ ಮಾತುಕತೆ. ವೀಣಾ ವಾಸ್ತವ ಲೋಕಕ್ಕೆ ಬಂದು ಥಟ್ಟನೆ ಎಚ್ಚರಗೊಳ್ಳುತ್ತಾಳೆ. ಮತ್ತದೇ ರಾಗದಲ್ಲಿ ಅಳುತ್ತಿರುವ ವಾಣಿ, ಗದರಿಕೊಳ್ಳುವ ಅಮ್ಮ, ಅಯ್ಯೋ ರಾಮ... ಇವರಿಗೆ ತನ್ನ ಪರಿಸ್ಥಿತಿ ಅರ್ಥವೇ ಆಗೋಲ್ವಲ್ಲ ಅಂತ ಪರಿತಪಿಸುತ್ತಾಳೆ. ರಂಗರಾಯರ ಮನೆಯ ಮುಂದಿನ ಎಂಟು ಮೆಟ್ಟಿಲುಗಳನ್ನು ಇಳಿದು ಅಡಿಕೆ ತೋಟದ ಕಾಲು ದಾರಿಯಲ್ಲಿ ಸಾಗಿ ಎರಡು ಮಾರು ದೂರ ನಡೆದು ಎಡಕ್ಕೆ ತಿರುಗಿದರೆ ಪಿಂಟೋನ ಅಂಗಡಿ. ರಾಯರು ಹೆಣ್ಣು ಮಕ್ಕಳನ್ನ ಒಂಟಿಯಾಗಿ ರಸ್ತೆಗಿಳಿದು ತಿರುಗಾಡಲು ಬಿಡುವುದಿಲ್ಲ. ಯಾವಾಗಲೂ ತಾಯಿಯ ಜೊತೆ ಹೋಗುತ್ತಾರೆ. ಯಾರೂ ಇಲ್ಲದಾಗ ಕಡೆ ಪಕ್ಷ ಕೆಲಸದ ಹೆಂಗಸರು ಹೋದರು ಹೋಗಬಹುದು. ತಾನಂತೂ ಈ ದಿನ ಹೋಗಲಾರೆ ದೃಢನಿರ್ಧಾರ ಮಾಡ್ತಾಳೆ. ಸಂಜೆಯವರೆಗೂ ಹಾಗೂ ಹೀಗೂ ಗಲಾಟೆಯಿಂದಿದ್ದ ಮನೆ ಇದ್ದಕ್ಕಿದ್ದಂತೆ ಮೌನ ತಳೆದಿದ್ದು, ಅಚ್ಚರಿಯಾಗಿತ್ತು ನಂಗೇನು ಅಷ್ಟು ಗೊತ್ತಾಗಲ್ವಾ, ಎಳೇ ಮಗುವೆ, ಇವರಿಗೆಲ್ಲಾ ಸರಿಯಾಗಿಯೇ ಪಾಠ ಕಲಿಸುವೆ ತನ್ನಲ್ಲೇ ಗೊಣಗಿಕೊಳ್ಳುತ್ತಾ, ದಾರಿ ಸವೆಯುತ್ತಿದ್ದಾಳೆ. ವಾಣಿ ಕೈಯಲ್ಲಿ ಹಿಡಿದುಕೊಂಡ ಪ್ಲಾಸ್ಟಿಕ್ ಕವರ್‌ನಲ್ಲಿ ಹೊಸ ಪವಾಡ ಬಟ್ಟೆ ಲಂಗ, ರವಿಕೆಯದ್ದು ಮತ್ತೊಂದೆರಡು ಹಳೆಯ ಚಿಕ್ಕದಾದ ಲಂಗ ರವಿಕೆಯದ್ದು. ಮುಸ್ಸಂಜೆ ದಾಟಿ ಹೋಗುತ್ತಿದೆ.

'ಏನಮ್ಮಾ ಸರಿಯಾದ ಅಳತೆ ಬಟ್ಟೆಗಳನ್ನು ತಂದಿದೀಯಾ?' ಯಥಾ ಪ್ರಕಾರ ಪಿಂಟೋ ಕೇಳುತ್ತಾನೆ. ಆ ಹೊತ್ತಿಗಾಗಲೇ ಒಂದಿಬ್ಬರು ಬಂದು ಹೊಲಿದ ಬಟ್ಟೆಗಳನ್ನು ತೆಗೆದುಕೊಂಡು ದುಡ್ಡು ಕೊಟ್ಟು ಹೊರಡಲನುವಾಗಿದ್ದಾರೆ. ಬಟ್ಟೆಗಳನ್ನು ಅಳತೆ ಮಾಡಿಕೊಳ್ಳುವಾಗ ಪಿಂಟು ಮಧ್ಯದಲ್ಲಿ ಪಕ್ಕದ ಗಲ್ಲಾದ ಮೇಲೆ ಗಮನ ಹರಿಸಿದ್ದಾನೆ. ಪಿಂಟೋ ಬಿಲ್ ಮಾಡಿದಾಗ ರಾಧಾ ಪ್ರತ್ಯಕ್ಷವಾಗುತ್ತಾಳೆ. 'ಏನು ಇನ್ನೂ ಮುಗಿಲಿಲ್ವಾ?' ಅಂತಲೇ ಬರ್ತಾಳೆ. ಪಿಂಟೋಗೆ ಮಾತನಾಡಲೂ ಅವಕಾಶ ಕೊಡದೆ ಟೇಪ್ ಹಿಡಿದು ಅಳತೆ ತೆಗೆದುಕೊಳ್ಳಲು ಮುಂದಾಗುತ್ತಾಳೆ. ಪಿಂಟೋ ಮಧ್ಯದಲ್ಲೇ ಕೈ ಆಡಿಸಿ ಬೇಡ ಅನ್ನುವಂತೆ ಸನ್ನೆ ಮಾಡ್ತಾನೆ, ಸ್ವಲ್ಪ ಅವಳ ಪಕ್ಕ ಸರಿದು ಅವಳ ಕಿವಿಯಲ್ಲಿ ಏನೋ ಹೇಳ್ತಾನೆ. ಸರಿ ಅನ್ನುವಂತೆ ತಲೆ ಅಲ್ಲಾಡಿಸಿದ ರಾಧಾ ವಾಣಿಯನ್ನು 'ಇಲ್ಲಿ ಬಾಮ್ಮ ಸ್ವಲ್ಪ' ಅಂತ ಟ್ರಯಲ್ ರೂಂಗೆ ಕರೆದುಕೊಂಡು ಹೋಗುತ್ತಾಳೆ ಆ ಹೊತ್ತಿಗೆ ಇನ್ನೊಂದಿಬ್ಬರೂ ಗಿರಾಕಿಗಳು ಬಟ್ಟೆ ಡೆಲಿವರಿ ಪಡೆದು ಬಿಲ್ ಪಾವತಿಸಲು ಮುಂದಾಗುತ್ತಾರೆ. 'ನೀವೆಲ್ಲಾ ಸ್ವಲ್ಪ ನಾಳೆ ಬನ್ನಿ, ನಂಗೆ ಅರ್ಜೆಂಟಾಗಿ ಮನೆಗೆ ಹೋಗ್ಬೇಕಿದೆ' ಎನ್ನುತ್ತಾನೆ. ಯಾವತ್ತು ಹೇಳಿದ ದಿನಕ್ಕೆ ಸರಿಯಾಗಿ ತಪ್ಪಿಸದೆ ಕೊಟ್ಟುಬಿಡ್ತಾ ಇದ್ನಲ್ಲ ಅಂತ ಗೊಣಗಾಡುತ್ತಾ ಹಿಂದಿರುಗುತ್ತಾರೆ ಆ ಗಿರಾಕಿಗಳು. ಟ್ರಯಲ್ ರೂಂ ನ ಒಳಗಿನಿಂದ ಅಳುತ್ತಾ ಗೋಗರೆಯುತ್ತಿರುವ ವಾಣಿಯ ಧ್ವನಿ ಕೇಳಿದರು ಈಚೆ ಕಲ್ಲಿನಂತೆ ನಿಂತಿದ್ದಾನೆ ಪಿಂಟೋ. ಮೊದಲು ರಾಧಾ ಬರುತ್ತಾಳೆ ಇಲ್ಲ ಎನ್ನುವಂತೆ ತಲೆ ಆಡಿಸಿ ಹೊರಟು ಹೋಗುತ್ತಾಳೆ. ವಾಣಿ ತಲೆ ತಗ್ಗಿಸಿ ಅಳುತ್ತಲೆ ಈಚೆ ಬರುತ್ತಾಳೆ. ತನಗೂ ಅದಕ್ಕೂ ಯಾವ ಸಂಬಂಧವೂ ಇಲ್ಲವೆನ್ನುವಂತೆ ಕಾಠಿಣ್ಯದಿಂದ ಮುಖ ಎತ್ತಲೋ ತಿರುಗಿಸಿ ನಿಂತಿದ್ದಾನೆ ಇವನು. ವಾಣಿ ಅಳುತ್ತಾ ರಸ್ತೆಯ ಕೊನೆಯವರೆಗೂ ಹೋಗಿ ಎಡಕ್ಕೋ ಬಲಕ್ಕೋ ತಿರುಗಿದ್ದು ಅವನು ನೋಡಲಿಲ್ಲ. ರಾಶಿ ಬಿದ್ದಿದ್ದ ಬಟ್ಟೆಗಳ ಮೇಲೆ ಅಲ್ಲಿಂದ ಜಾರಿ ನೆಲದ ಮೇಲೆ ಬಿದ್ದಿದ್ದ ಕತ್ತರಿಸಿದ ಬಟ್ಟೆ ತುಂಡುಗಳ ರಾಶಿ. ಅದರ ಮೇಲೆ ಬಿದ್ದಿದ್ದ ನೂರು ರೂಪಾಯಿಯ ನೋಟೊಂದು ಪಿಂಟೋವನ್ನ ನೋಡಿ ಅಣಕಿಸುವಂತೆ ಭಾಸವಾಯ್ತು.

ಮಾರನೆಯ ದಿನ ಬೆಳಗ್ಗೆ ಎಂದಿನಂತೆ ಪಿಂಟೋ ನಸುಕು ಕಳೆದು ಬೆಳ್ಳಿ ಕಿರಣಗಳು ಮೂಡಿದ ಹೊತ್ತಿಗೆ ಅಂಗಡಿ ತೆರೆಯಲು ಬರುತ್ತಿದ್ದಾನೆ. ಎದುರು ಎಷ್ಟೋ ಸಾರಿ ತಿರುಗಿ ಓಡಾಡಿರುವ ದೊಡ್ಡ ಹೊಂಡದ ಪಕ್ಕದ ಕಾಲು ದಾರಿ ! ಜನರ ಗುಂಪೊಂದು ಗುಸು ಗುಸು ಅನ್ನುತ್ತಾ ಸುತ್ತುವರಿದಿದೆ. ಏನು ನಡೀತಾ ಇದೆ ಅಲ್ಲಿ ? ಎದುರಾದ ಒಬ್ಬ ಹೆಂಗಸು ಏನೋ ಗೊತ್ತಿಲ್ಲ, ನಾನು ಈಗಷ್ಟೇ ಬಂದಿದ್ದು ಎನ್ನುತ್ತಾಳೆ. ಇನ್ನೊಬ್ಬ ಗಂಡಸು ಅತ್ತಲಿಂದಲೇ ಬರುತ್ತಾ ಇದ್ದಾನೆ, ಪಿಂಟೋ ಅವನನ್ನಾ ನೋಡಿ ಎಂಥದ್ದು ಅಲ್ಲಿ ಎಲ್ಲಾ ಜಮಾಯಿಸಿರೋದು ಬೆಳ್ಳಂ ಬೆಳಿಗ್ಗೆ? ಸ್ವಲ್ಪ ದೂರ ಸೈಕಲ್ ಅನ್ನು ಬದಿಗೆ ತಳ್ಳಿ ನಿಲ್ಲಿಸುತ್ತಾನೆ. ಹೊಂಡದ ನೀರಿನಲ್ಲಿ ಏನೋ ತೇಲುತ್ತಿರುವಂತಿದೆಯಂತೆ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾಗಿದೆಯಂತೆ ! ಒಂದೇ ಉಸಿರಿನಲ್ಲಿ ಹೇಳಿ, ನಾ ಇನ್ನು ಬರ್ತೀನಿ ಅಂತ ಹೋಗೇ ಬಿಟ್ಟ, ಇನ್ನೊಬ್ಬ ...... ಒಂದಿಬ್ಬರು ಹುಡುಗರನ್ನ ಬೈದು ಅಟ್ಟಾಡುತ್ತಿದ್ದ .... 'ಶಾಲೆಗೆ ಹೋಗೋದು ಬಿಟ್ಟು ಇಲ್ಲಿ ಎಂಥದ್ದು ತಮಾಷೆ ನೋಡ್ತಾ ಇದ್ದೀರಾ ? ನಡೀರಿ ! ನಡೀರಿ !' ಪಿಂಟೋ ಜನರ ಗುಂಪನ್ನ ಭೇದಿಸಿ ನುಗ್ಗಿ ನೋಡಿದ. ಹುಡುಗಿಯ ದೇಹ ಮಗ್ಗುಲಾಗಿ ಮಗುಚಿ ತೇಲುತ್ತಾ ಇದೆ. ಈ ಹುಡುಗಿ ತೊಟ್ಟ ಲಂಗ, ರವಿಕೆಯ ಬಣ್ಣ ಎಲ್ಲೋ ಕಂಡಂತಿದೆ ಅನಿಸಿತು ಪಿಂಟೋಗೆ. ಥಟ್ಟನೆ ಇನ್ನೊಬ್ಬರು ಹೇಳಿದರು. ಚಿಕ್ಕ ವಯಸ್ಸಿನ ಹುಡುಗಿ, ಯಾರ ಮನೆಯದ್ದೋ ಮುಖ ನೋಡಿದರೆ ತಿಳಿಯುತ್ತೆ ಇನ್ನೊಬ್ಬರು ಕಾಲು ಜಾರಿ ಬಿದ್ದಿರಬಹುದು. ಈ ಮಳೆಗಾಲದಲ್ಲಿ ಇಲ್ಲೆಲ್ಲ ಕೆಸರು ರಾಡಿಯಾಗಿದೆ ಅಥವಾ ಇನ್ನು ಏನಾದ್ರು ಸಮಾಚಾರವಿರಬಹುದೇ ? ಛೆ ! ಛೆ ! ಇರಲಾರದು ಚಿಕ್ಕ ಹುಡುಗಿ ಪಾಪ ! ಪಿಂಟೋಗೆ ತಲೆ ಗಿರಗಿರನೆ ತಿರುಗುವಂತಾಯ್ತು. ಗಕ್ಕನೆ ಸೈಕಲ್ ಏರಿ ಹೊರಟೇ ಬಿಟ್ಟ.

ಇತ್ತ ವಾಣಿಯ ಮನೆಯಲ್ಲಿ ದೊಡ್ಡ ಕೂಗಾಟ ಕೇಳಿಸುತ್ತಿದೆ. 'ಯಾಕೆ ವೀಣಾ ಹೀಗೆ ಮಾಡಿದೆ? ಇಡೀ ಸಂಜೆ ಕಳೆದು ರಾತ್ರಿಯಾದರೂ ಮನೆಗೆ ಬರಲಿಲ್ಲವಲ್ಲ ನಿನ್ನ ತಂಗಿ, ಅವಳು ಎಷ್ಟೊತ್ತಿಗೆ ಹೋದಳು, ಯಾಕೆ ಹೋದಳು?'

'ನಾನು ನೋಡಲಿಲ್ಲ ಅಮ್ಮ, ನಾನು ಓದಿಕೊಳ್ತಾ ಇದ್ದೆ'. ಏನೋ ಹೊಳೆದಂತಾಗಿ ತಾಯಿ ಹೇಳಿದಳು, 'ರಾತ್ರಿ ಟೈಲರ್ ಅಂಗಡಿಗೆ ಬಾ ಅಂತ ಕರಿಯುತ್ತಾ ಇದ್ದಳಲ್ಲವೇನೆ?' 'ಹ್ಞೂಂ. ನಾನು ಆಗಲ್ಲ ಅಂದೆ. ಆದ್ರೆ ಅವಳು ಒಬ್ಳೆ ಹೋಗ್ತಾಳೆ ಅಂತ ನಂಗೇನು ಗೊತ್ತು? ಅದು ಬಿಡು ಇಡೀ ರಾತ್ರಿ ಅವಳು ಮನೇಲಿ ಇಲ್ಲ ಅಂತ ತಿಳಿಲಿಲ್ವೆ ? ಅಮ್ಮಾ ನಾನು ಅವಳ ಅಳು ರಾಗ ಕೇಳಲಾಗದೆ ರೂಮಿನ ಬಾಗಿಲು ಹಾಕಿಕೊಂಡು ಓದ್ತಾ ಕುಳಿತ್ತಿದ್ದೆ. ಎಷ್ಟು ಹೊತ್ತಿಗೆ ಮಲಗಿದೆನೋ ನನಗೇ ತಿಳಿಯಲಿಲ್ಲ, ಮತ್ತೆ ಬೆಳಿಗ್ಗೆ ಎದ್ದು ಬಾಗಿಲ ತೆರೆದೆ, ಅವಳ ರೂಂ ಬಾಗಿಲು ಹಾಕಿತ್ತು, ಅವಳು ಓದ್ತಾ ಇದ್ಲಲ್ವಾ? ಹೀಗೆ ಹೋಗಿದ್ದಾಳೆ ಅಂತ ನಂಗೆ ಹೇಗೆ ತಿಳಿಯಬೇಕು?'

ಏನೋ ಹೊಳೆದಂತೆ ಇಬ್ಬರೂ ಮುಖ ಮುಖ ನೋಡಿಕೊಂಡರು. 'ಬಾ ಹೋಗೋಣ' ಅಂತ ರಂಗರಾಯರು ಆಚೆಗೆ ಚಪ್ಪಲಿ ಹಾಕಿಕೊಳ್ಳಲು ಬಂದರು. ಅವರ ಹಿಂದೆಯೇ ಲಕ್ಷ್ಮೀ ಬಾಯಿ ಬರುವುದಕ್ಕೂ ಪೊಲೀಸರ ಜೀಪ್ ಅವರ ಮನೆಯ ಮುಂದೆ ಬಂದು ನಿಲ್ಲುವುದಕ್ಕೂ ಆತಂಕದಿಂದಿಬ್ಬರೂ ಗೇಟಿನ ಕಡೆ ಓಡಿ ಬಂದರು. ಪೊಲೀಸರ ಜೊತೆ ಒಂದಿಬ್ಬರು ವ್ಯಕ್ತಿಗಳು ಬಂದಿದ್ದರು. ಊರಿಗೆ ಹೊಸಬರೇನೋ ಅವರ ಪರಿಚಯ ರಾಯರಿಗೆ ಇರಲಿಲ್ಲ. ಪೊಲೀಸರು ಊರಿನಲ್ಲಿ ಮತ್ತು ಹೊಂಡದ ಆಸುಪಾಸಿನಲ್ಲಿನ ಮನೆಗಳಲ್ಲಿ ವಿಚಾರಿಸಿದ್ದರು. ಅದಕ್ಕೆಂದೇ ವಿಚಾರಣೆ ನಡೆಸಿದ ನಂತರ ರಾಯರ ಪರಿಚಯ ಇಲ್ಲವೆಂದು ಹೇಳಿದ್ದು ಖಾತ್ರಿ ಮಾಡಿಕೊಳ್ಳಲು ಪೊಲೀಸರು ಅವರನ್ನು ಕರೆ ತಂದಿದ್ದರು.

ರಂಗರಾಯರು 'ಸರ್, ನಾವೇ ನಿಮ್ಮನ್ನ ನೋಡಲು ಬರುವವರಿದ್ದೆವು ಹೌದು ... ನಮ್ಮ ಹುಡುಗಿ ನಿನ್ನೆ ರಾತ್ರಿಯಿಂದ ಮನೆಗೆ ಬಂದಿಲ್ಲ. ಎಲ್ಲಿ ಹೋದಳೋ? ಇನ್ನೂ ಯಾಕೆ ಬರಲಿಲ್ಲವೋ' ಅಳುತ್ತಿದ್ದರು ಲಕ್ಷ್ಮೀಬಾಯಿ. ಪೊಲೀಸರು ನಿಮ್ಮ ಹುಡುಗಿ ಎಂದರೆ?, ಮುಂದುವರೆಸಿ ...'ನಿಮ್ಮ ಸಂಬಂಧಿಕಳೇ? ಇಲ್ಲ ಕೆಲಸದವಳೇ?' ಮಧ್ಯದಲ್ಲೇ ರಂಗರಾಯರು ಬನ್ನಿ, ಒಳಗೆ ಕೂತು ಮಾತಾಡೋಣ. ಹೆಂಡತಿಯ ಕಡೆ ತಿರುಗಿ, ನೀನು ಒಳಗೆ ಹೋಗು ಅಂದರು. ಪೊಲೀಸರು 'ಸರಿ ಹಾಗಿದ್ರೆ ನೀವೇ ಕಂಪ್ಲೇಂಟ್ ಬರೆದು ಕೊಡಿ.

## ಬಾತ್-ಚೀತು!

ಬಡವನ
ಮಹಡಿಗೆ
ತೂತು
ಮಲಗಿ
ಆಗಸದೊಂದಿಗೆ
ಬಾತ್–ಚೀತು!

★ ಗೋಪಿ ಹಿರೇಬೆಟ್ಟು

